**ದಿನಾಂಕ 17-03-2023 ರಂದು ಬೆಳಗ್ಗೆ 11.00 ಗಂಟೆಗೆ ಕುಲಪತಿಗಳ ಸಭಾಂಗಣ, ಕೃವಿವಿ., ರಾಯಚೂರಿನಲ್ಲಿ ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 53ನೇ ಸಭೆಯ ನಡವಳಿಗಳು:**

**ಉಪಸ್ಥಿತರು:**

| | | | |
|---|---|---|---|
| 1. | ಡಾ. ಎಂ. ಹನುಮಂತಪ್ಪ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು | ಭೌತಿಕ |
| 2. | ಶ್ರೀ ಶಿವಯೋಗಿ ಸಿ ಕಳಸದ, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ. | ಸದಸ್ಯರು | ವರ್ಚುವಲ್ |
| 3. | ಡಾ॥ ಮಂಗಳಾ, ಜಿ.ಎಸ್, ಸರ್ಕಾರದ ಅಪರ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 4. | ಶ್ರೀ ಕೊಟ್ರೇಶಪ್ಪ ಬಿ. ಕೋರಿ, ರಾಯಚೂರು | ಸದಸ್ಯರು | ಭೌತಿಕ |
| 5. | ಶ್ರೀ ತ್ರಿವಿಕ್ರಮ ಜೋಶಿ, ರಾಯಚೂರು | ಸದಸ್ಯರು | ಭೌತಿಕ |
| 6. | ಶ್ರೀ ಮಹಾಂತೇಶ್‌ಗೌಡ ಪಾಟೀಲ್, ಕೊಪ್ಪಳ | ಸದಸ್ಯರು | ಭೌತಿಕ |
| 7. | ಶ್ರೀ ಜಿ. ಶ್ರೀಧರ ಕೆಸರಹಟ್ಟಿ, ಗಂಗಾವತಿ | ಸದಸ್ಯರು | ಭೌತಿಕ |
| 8. | ಶ್ರೀ ಸುನಿಲ್, ರಾಯಚೂರು | ಸದಸ್ಯರು | ಭೌತಿಕ |
| 9. | ಡಾ. ಎಂ. ವೀರನಗೌಡ, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ-ಕಾರ್ಯದರ್ಶಿ | ಭೌತಿಕ |

ಪ್ರಾರಂಭದಲ್ಲಿ, ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ವರ್ಚುವಲ್ ಹಾಗೂ ಭೌತಿಕವಾಗಿ ಹಾಜರಿದ್ದ ಎಲ್ಲಾ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಇತ್ತೀಚೆಗೆ ಬೆಂಗಳೂರಿನಲ್ಲಿ ಜರುಗಿದ ಸಿರಿಧಾನ್ಯಗಳು ಮತ್ತು ಸಾವಯವ ಕುರಿತಾದ ಅಂತರಾಷ್ಟ್ರೀಯ ಟ್ರೇಡ್ ಫೇರ್-2023 ರಲ್ಲಿ ರಾಷ್ಟ್ರೀಯ ಸಿರಿಧಾನ್ಯ ಪ್ರಶಸ್ತಿ ಲಭಿಸಿದ್ದು, ಅತ್ಯಂತ ಸಂತೋಷದ ವಿಷಯವೆಂದು ಸಭೆಯ ಅವಗಾಹನೆಗೆ ತರಲಾಯಿತು.

ತದನಂತರ, ಕೊರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| **ಐಟಂ-1** | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 52 ನೇ ಸಭೆಯ ಮತ್ತು ದಿನಾಂಕ 31-12-2022 ರ ಪರಿಚಲನಾ ಸಭೆಗಳ ನಡವಳಿಗಳನ್ನು ಸ್ಥಿರೀಕರಿಸುವುದು.**<br>**ಠರಾವು:**<br>ದಿನಾಂಕ 21-11-2022 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 52ನೇ ಸಭೆಯ ಮತ್ತು ದಿನಾಂಕ 31-12-2022 ರ ಪರಿಚಲನಾ ಸಭೆಗಳ ನಡವಳಿಗಳನ್ನು ಸ್ಥಿರೀಕರಿಸಲಾಯಿತು.<br>(ಕ್ರಮ : ಕುಲಸಚಿವರು) |

**ಐಟಂ–2**

**ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 52 ನೇ ಸಭೆಯ ಮತ್ತು ದಿನಾಂಕ 31–12–2022 ರ ಪರಿಚಲನಾ ಸಭೆಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.**

ದಿನಾಂಕ 21–11–2022 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 52ನೇ ಸಭೆಯ ಮತ್ತು ದಿನಾಂಕ 31–12–2022 ರ ಪರಿಚಲನಾ ಸಭೆಗಳ ನಡವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಈ ಕೆಳಗಿನಂತೆ ನಿರ್ಣಯಿಸಲಾಯಿತು:

**ಐಟಂ–14 : ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹನ್ನೆರಡನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳ ಪ್ರದಾನ ಮಾಡಲು ಅನುಮೋದನೆ ಕುರಿತು.**

**ಠರಾವು:**

ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಹನ್ನೆರಡನೇಯ ಘಟಿಕೋತ್ಸವದಲ್ಲಿ ಸ್ನಾತಕ ಪದವಿಗಳನ್ನು ಪಡೆಯುವ ಅರ್ಹ ಅಭ್ಯರ್ಥಿಗಳ **ಹೆಚ್ಚುವರಿ ಯಾದಿಯನ್ನು** ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009 ರ ಕಲಂ 13(2)(viii) ರನ್ವಯ ಸ್ನಾತಕ ಪದವಿಗಳನ್ನು ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

**(ಕ್ರಮ : ಕುಲಸಚಿವರು)**

**ಐಟಂ–15 : ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹನ್ನೆರಡನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳ ಪ್ರದಾನ ಮಾಡಲು ಅನುಮೋದನೆ ಕುರಿತು.**

**ಠರಾವು:**

ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಹನ್ನೆರಡನೇಯ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆಯುವ ಅರ್ಹ ಅಭ್ಯರ್ಥಿಗಳ **ಹೆಚ್ಚುವರಿ ಯಾದಿಯನ್ನು** ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 13(2)(viii) ರನ್ವಯ ಸ್ನಾತಕೋತ್ತರ ಪದವಿಗಳನ್ನು ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

**(ಕ್ರಮ : ಕುಲಸಚಿವರು)**

**ಐಟಂ–3**

**ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.**

**ಠರಾವು:**

ರೂ. 10.00 ಲಕ್ಷ ಅಧಿಕದ ಈ ಕೆಳಕಂಡ ಹೊಸ ಸಿವಿಲ್ ಕಾಮಾಗಾರಿಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಯ ಹಿನ್ನೆಲೆಯಲ್ಲಿ ಕೃವಿವಿ., ರಾಯಚೂರಿನ ಮುಖ್ಯ ಆವರಣ ಮತ್ತು ಅಧೀನದ ಆವರಣದಲ್ಲಿ ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| ಕ್ರಮ ಸಂ. | ಸಿವಿಲ್ ಕಾಮಗಾರಿಯ ವಿವರ | ಅಂದಾಜು ಬೆಲೆ (ರೂ.) ಲಕ್ಷಗಳಲ್ಲಿ | ಅನುದಾನ ವಿವರ |
|---|---|---|---|
| I | **ಕೃ.ವಿ.ವಿ. ರಾಯಚೂರು.** | | |
| 1 | ಕೃಷಿ ವಿಶ್ವವಿದ್ಯಾಲಯ ರಾಯಚೂರು ಆವರಣದಲ್ಲಿ ಜಿಯೋ ಸ್ಪೇಶಿಯಲ್ ಟೆಕ್ನಾಲಜಿ ಅಪ್ಲಿಕೇಶನ್ ಸೆಂಟರ್‌ನ ಮೊದಲನೇ ಮಹಡಿ ನಿರ್ಮಿಸುವ ಕೆಲಸ. | 20.50 | RKVY ಜಿ.ಟಿ.ಎ.ಸಿ 1039/801 |
| II | **ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿ.** | | |
| 2 | ವಲಯ ಕೃಷಿ ಸಂಶೋಧನಾ ಕೇಂದ್ರ ಕಲಬುರ್ಗಿಯಲ್ಲಿ ಪಶ್ಚಿಮ ಭಾಗದ ಕಂಪೌಂಡ ಗೋಡೆಯನ್ನು ನಿರ್ಮಿಸುವ ಕೆಲಸ. | 67.94 | ಕೃವಿವಿ ಸಂಶೋಧನಾ ಅನುದಾನ 6002/801 |

| | | | |
|---|---|---|---|
| III | **ಕೃಷಿ ಮಹಾವಿದ್ಯಾಲಯ ಹಗರಿ.** | | |
| 3 | ಕೃಷಿ ಮಹಾವಿದ್ಯಾಲಯ ಹಗರಿಯಲ್ಲಿ ಕಾಲೇಜ್ ಕಟ್ಟಡದ ಮೊದಲನೇ ಮಹಡಿ ನಿರ್ಮಿಸುವ ಕೆಲಸ. | 415.00 | ಕೃವಿವಿ ಅನುದಾನ |
| 4 | ಕೃಷಿ ಮಹಾವಿದ್ಯಾಲಯ ಹಗರಿಯಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯ (ಮುಂದಿನ ಅರ್ಧ ಭಾಗ) (G+2) ನಿರ್ಮಿಸುವ ಕೆಲಸ. | 598.50 | ಕೃವಿವಿ ಅನುದಾನ |
| IV | **Reward ಯೋಜನೆ** | | |
| 5 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಡಿಯಲ್ಲಿ ಬರುವ ಕಲಬುರ್ಗಿ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಯಲ್ಲಿ ಬರುವ ಮೈಕ್ರೊ ವಾಟರ್ ಶೆಡ್ ಏರಿಯಾದಲ್ಲಿ ಮಣ್ಣಿನ ಸ್ತರಗಳನ್ನು ಅಭ್ಯಸಿಸುವ ಗುಂಡಿಗಳನ್ನು ನಿರ್ಮಿಸಲು ಜೆ.ಸಿ.ಬಿ., ಯ ಹೈಡ್ರಾಲಿಕ್ ಎಸ್ಕವೇಟರ್‌ಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುವ ಕೆಲಸ. | 30.00 | Reward ಯೋಜನೆ |

**(ಕ್ರಮ : ಆಸ್ತಿ ಅಧಿಕಾರಿ)**

**ಐಟಂ–4** **ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣದ ಖರೀದಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಪ್ರಯೋಗಾಲಯದ ಪ್ರತಿ ಉಪಕರಣಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| Sl. No. | Name of the Equipment | Name of the Department/ Project | Qty | Approximate Cost in (Rs. Lakhs) | Funding Agency with allotted Ab. A/c. No. |
|---|---|---|---|---|---|
| 1. | To Set-up Conference Room | Director of Research, UAS, Raichur. | 1 set | 40.00 | 6005/701 |
| 2. | LC-MS/MS | Professor & Head PRFQA Lab, UAS, Raichur | 1 set | 230.00 | RKVY Project |

**(ಕ್ರಮ : ಸರಕು ಖರೀದಿ ಅಧಿಕಾರಿ)**

**ಐಟಂ–5** **ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ ಕೃಷಿ ಮಹಾವಿದ್ಯಾಲಯ, ಕಲಬುರಗಿಯ / ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿಯ ಜಮೀನು ಉಚಿತವಾಗಿ ಒದಗಿಸುವ ಕುರಿತು.**

**ಠರಾವು:**

ದೀರ್ಘ ಚರ್ಚೆಯ ನಂತರ, ಕೃಷಿ ಮಹಾವಿದ್ಯಾಲಯ, ಕಲಬುರಗಿ ಮತ್ತು ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿಗೆ ಸಂಬಂಧಿಸಿದ ಜಮೀನಿನಲ್ಲಿ 10 ಎಕರೆ ಜಮೀನನ್ನು ಕಲ್ಯಾಣ–ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ ಉಚಿತವಾಗಿ ಮಂಜೂರು ಮಾಡುವಂತೆ ಕೋರಿರುವ ಸರ್ಕಾರದ ಪ್ರಸ್ತಾವನೆಯನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ 2009 ರ ಕಲಂ 12 (2) (iii) ರ ಪ್ರದತ್ತವಾದ ಅಧಿಕಾರದನ್ವಯ ಪರಿಶೀಲಿಸಲಾಗಿ, ಪ್ರಸ್ತುತ ಕೃಷಿ ಮಹಾವಿದ್ಯಾಲಯ, ಕಲಬುರಗಿ ಮತ್ತು ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿಯಲ್ಲಿ ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಜಮೀನಿನ ಕೊರತೆ ಇದ್ದು, ಕಲ್ಯಾಣ–ಕರ್ನಾಟಕ ರಸ್ತೆ ಸಾರಿಗೆ ನಿಗಮಕ ಜಮೀನು ನೀಡುವ ಪ್ರಸ್ತಾವನೆಗೆ ಮಂಡಳಿಯು ಸಹಮತಿ ನೀಡಲಿಲ್ಲ.

ಮುಂದುವರೆದು, ವಿಶ್ವವಿದ್ಯಾಲಯದಲ್ಲಿ ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಜಮೀನಿನ ಕೊರತೆ ಇರುವುದರಿಂದ ಇನ್ನುಮುಂದೆ ಇಚಿತಹ ಪ್ರಸ್ತಾವನೆಗಳನ್ನು ಮಂಡಳಿಯ ಅನುಮೋದನೆಗೆ ಸಲ್ಲಿಸಬಾರದೆಂದು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಶ್ರೀ ಕೊಟ್ರೇಶಪ್ಪ ಬಿ. ಕೋರಿ ಇವರು ಮಂಡಳಿಗೆ ಸಲಹೆ ನೀಡಿದರು.

(ಕ್ರಮ: ಕುಲಸಚಿವರು)

**ಐಟಂ–6** **ಸಿ.ಎ.ಎಸ್. 2006 ಯೋಜನೆಯಡಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ / ವಿಜ್ಞಾನಿಗಳ ಪದೋನ್ನತಿಯ ಕುರಿತು ಅನುಮೋದನೆ ನೀಡುವುದು.**

**ಠರಾವು:**

ಚರ್ಚೆಯ ನಂತರ, ಸಿ.ಎ.ಎಸ್.–2006 ಅಡಿ ಶೈಕ್ಷಣಿಕ ಹಚಿತ 10 ರಿಂದ 11 ಕ್ಕೆ (**2** ಶಿಕ್ಷಕರುಗಳಿಗೆ), ಶೈಕ್ಷಣಿಕ ಹಚಿತ 11 ರಿಂದ 12 ಕ್ಕೆ (**58** ಶಿಕ್ಷಕರಿಗೆ), ಶೈಕ್ಷಣಿಕ ಹಂತ 12 ರಿಂದ 13 ಎ ಕ್ಕೆ (**14** ಶಿಕ್ಷಕರಿಗೆ) ಹಾಗೂ ಶೈಕ್ಷಣಿಕ ಹಂತ 13 ಎ ರಿಂದ 14 ಕ್ಕೆ (**09** ಶಿಕ್ಷಕರಿಗೆ) ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರುಗಳಿಗೆ ಸಿ.ಎ.ಎಸ್.–2006 ನಿಯಮಾವಳಿಗಳ ಪ್ರಕಾರ ಅರ್ಹತೆ ಹೊಂದಿದ ದಿನಾಂಕ ಹಾಗೂ ಇತರೆ ಮಾನದಂಡಗಳನ್ವಯತೆ ಮುಂಬಡ್ತಿ ಆದೇಶಗಳನ್ನು ನಡವಳಿಗಳ ಸ್ಥಿರೀಕರಣಕ್ಕೆ ನಿರೀಕ್ಷಿಸದೇ ಹೊರಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು)

**ಐಟಂ–7** **ಡಾ. ಹೆಚ್.ವಿ. ರುದ್ರಮೂರ್ತಿ, ಸಹಾಯಕ ಪ್ರಾಧ್ಯಾಪಕರು (ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ), ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಇವರ ಸಿ.ಎ.ಎಸ್.–2006 ಅಡಿ ಪದೋನ್ನತಿಯ ಅರ್ಹತಾ ದಿನಾಂಕವನ್ನು ತಿದ್ದುಪಡಿ ಮಾಡುವ ಕುರಿತು.**

**ಠರಾವು:**

ದೀರ್ಘ ಚರ್ಚೆಯ ನಂತರ, ಡಾ. ಹೆಚ್.ವಿ. ರುದ್ರಮೂರ್ತಿ, ಸಹಾಯಕ ಪ್ರಾಧ್ಯಾಪಕರು (ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ), ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಇವರ ಸಿ.ಎ.ಎಸ್.–2006 ಅಡಿ ಪದೋನ್ನತಿಯ ಅರ್ಹತಾ ದಿನಾಂಕವನ್ನು ತಿದ್ದುಪಡಿ ಮಾಡುವ ಕುರಿತು ಗೌರಿವಾನ್ವಿತ ಕುಲಪತಿಗಳು, ಕೃವಿವಿ., ರಾಯಚೂರು ಇವರ ಹಂತದಲ್ಲಿ ನಿರ್ಣಯ ಕೈಗೊಳ್ಳುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು)

**ಐಟಂ–8** **ಕೃವಿವಿ., ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

**ಮಾನ್ಯತೆ ಹೊಂದಿದ ಆಸ್ಪತ್ರೆಗಳಲ್ಲಿ** ಈ ಕೆಳಕಂಡ ಸಿಬ್ಬಂದಿಯ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಯನ್ನು ರೂ. 2,00,000/– ಗಳಿಗೆ ನಿರ್ಬಧಿಸಿ, ಸಭೆಯು ಅನುಮೋದಿಸಿ, ಠರಾಯಿಸಿತು :

| ಕ್ರಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಕ್ಲೇಮು ಮಾಡಿದ ಮೊತ್ತ (ರೂ.) | ಕೃವಿವಿ., ವೈದ್ಯಾಧಿಕಾರಿಗಳು ತಪಾಸಿಸಿದ ಮೊತ್ತ (ರೂ) | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಬೆಂಗಳೂರು ಇವರು ಪರಿಶೀಲಿಸಿ ಮೇಲುರುಜು ಮಾಡಿದ ನಂತರ ಪಾವತಿಸ ಬೇಕಾದ ಮೊತ್ತ (ರೂ) |
|---|---|---|---|---|
| 1. | ಶ್ರೀ. ಎಂ ನಾಗರಾಜ<br>ಕೃಷಿ ಕಾರ್ಮಿಕ<br>ಕೃಷಿ ಸಂಶೋಧನಾ ಕೇಂದ್ರ, ಸಿರುಗುಪ್ಪ | 9,69,069=00 | 6,41,028=00 | 6,41,028=00 |

ಈ ಕೆಳಕಂಡ ಸಿಬ್ಬಂದಿಯವರು **ಸರಕಾರ / ಕೃವಿವಿ.,ದಿಂದ ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಪಡೆದು ಸಲ್ಲಿಸಲಾದ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು** ವೈದ್ಯಕೀಯ ಅಟೆಂಡೆನ್ಸ್ ನಿಯಮಾವಳಿಗಳನ್ವಯ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು ಇವರು ಪರಿಶೀಲಿಸಿ ಮೇಲುರುಜುಗೊಂಡ ಮೊತ್ತದ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ತನ್ನ ಅನುಮೋದನೆ ನೀಡಿತು :

| ಕ್ರ.ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಕ್ಲೇಮು ಮಾಡಿದ ಮೊತ್ತ (ರೂ.) | ಕೃವಿವಿ., ವೈದ್ಯಾಧಿಕಾರಿಗಳು ತಪಾಸಿಸಿದ ಮೊತ್ತ (ರೂ) | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಬೆಂಗಳೂರು ಇವರು ಪರಿಶೀಲಿಸಿ ಮೇಲುರುಜು ಮಾಡಿದ ನಂತರ ಪಾವತಿಸ ಬೇಕಾದ ಮೊತ್ತ (ರೂ) |
|---|---|---|---|---|
| 1 | ಡಾ. ರಾಘವೇಂದ್ರ, ಬಿ.ಟಿ<br>ಸಹಾಯಕ ಪ್ರಾಧ್ಯಾಪಕರು (ಸಸ್ಯ ರೋಗಶಾಸ್ತ್ರ) ವಿಸ್ತರಣಾ ನಿರ್ದೇಶನಾಲಯ<br>ಕೃವಿವಿ.,ರಾಯಚೂರು | 40,100=00 | 18,475=00 | 12,645=00 |
| 2 | ಶ್ರೀ. ಜಗದೀಶ<br>ಹಿರಿಯ ಸಹಾಯಕರು<br>ಕೃಷಿ ಮಹಾವಿದ್ಯಾಲಯ, ಕಲಬುರಗಿ | 17,933=00 | 7,133=00 | 7,777=00 |
| 3 | ಶ್ರೀ. ವೈಜಿನಾಥ ಸಿದ್ರಾಮಪ್ಪ ಕೊಡಗೆ<br>ಸಹಾಯಕರು<br>ಕೃಷಿ ಸಂಶೋಧನಾ ಕೇಂದ್ರ, ಬೀದರ | 83,558=00 | 34,196=00 | 20,542=00 |
| 4 | ಶ್ರೀ. ಜಂಗಮ ರೆಡ್ಡಿ<br>ಭಾರಿ ವಾಹನ ಚಾಲಕರು<br>ಕೃಷಿ ಸಂಶೋಧನಾ ಕೇಂದ್ರ, ಸಿರುಗುಪ್ಪ | 1,38,180=00 | 32,014=00 | 33,150=00 |

ಮುಂದುವರೆದು, ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿಗಳು ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವಂತೆ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿದ್ದು, ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಕ್ಕೆ ಭಾರಿ ನಷ್ಟವಾಗುತ್ತಿರುವ ಹಿನ್ನೆಲೆಯಲ್ಲಿ ಸಿಬ್ಬಂದಿಗಳನ್ನು ಆರೋಗ್ಯ ವಿಮೆ ಮಾಡಿಸಿಕೊಳ್ಳುವಂತೆ ಸೂಕ್ತ ಕ್ರಮವಹಿಸುವಂತೆ ಮಾನ್ಯ ವ್ಯವಸ್ಥಾಪನಾ ಮಾನ್ಯ ವ್ಯವಸ್ಥಾಪನಾ ಮಂಡಳಿಯು ವಿಶ್ವವಿದ್ಯಾಲಯಕ್ಕೆ ಸೂಚನೆಯನ್ನು ನೀಡಲಾಯಿತು.

**(ಕ್ರಮ: ಕುಲಸಚಿವರು / ಆಡಳಿತಾಧಿಕಾರಿಗಳು)**

**ಐಟಂ–9** **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರಿಗೆ ವೈದ್ಯಕೀಯ ವೆಚ್ಚವನ್ನು ಹಿಂತಿರುಗಿ ಪಡೆಯಲು ಬೆಟ್ಟದೂರು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರಿಗೆ ಮಾನ್ಯತೆ ಕೊಡುವ ಕುರಿತು.**

**ಠರಾವು:**

ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರುಗಳು ವೈದ್ಯಕೀಯ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗಲು **ಬೆಟ್ಟದೂರು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರಿಗೆ** ನಿಯಮಾವಳಿಗಳನ್ವಯ ಮಾನ್ಯತೆ ನೀಡುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.

**(ಕ್ರಮ: ಕುಲಸಚಿವರು / ಆಡಳಿತಾಧಿಕಾರಿಗಳು)**

| | |
|---|---|
| ಐಟಂ–10 | **ವಿಶ್ವವಿದ್ಯಾಲಯದ ತಾಂತ್ರಿಕ ಅಧಿಕಾರಿ / ಸಹಾಯಕ ಪ್ರಾಧ್ಯಾಪಕರುಗಳು ಉನ್ನತ ವಿದ್ಯಾಭ್ಯಾಸ ಕೈಗೊಳ್ಳಲು ಅನುವಾಗುವಂತೆ ನಿಗದಿತ ವಯೋಮಿತಿಯನ್ನು ಸಡಿಲಿಕೆ ಮಾಡಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಶಿಕ್ಷಕ / ತಾಂತ್ರಿಕ ಅಧಿಕಾರಿಗಳು ಉನ್ನತ ವಿದ್ಯಾಭ್ಯಾಸವನ್ನು ಕೈಗೊಳ್ಳಲು ನಿಗದಿಪಡಿಸಿದ ಗರಿಷ್ಠ ವಯೋಮಿತಿಯನ್ನು ಸಾಮಾನ್ಯ ಅಭ್ಯರ್ಥಿಗಳಿಗೆ 45 ರಿಂದ 50 ವರ್ಷಗಳು ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 55 ವರ್ಷಗಳ ವರೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಕೃವಿವಿ ಅಧಿಸೂಚನೆ Notification No. R/UASR/Est./BoM/4659/2012-13 dated 31-01-2023 ಮೂಲಕ ವಿಸ್ತರಿಸಿ, ಅಧಿಸೂಚಿಸಿದ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸ್ಥಿರೀಕರಿಸಿತು.<br>**(ಕ್ರಮ: ಕುಲಸಚಿವರು)** |
| ಐಟಂ–11 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2021–22 ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸಿ, ಸರ್ಕಾರಕ್ಕೆ ಸಲ್ಲಿಸುವ ಕುರಿತು.**<br><br>**ಠರಾವು:**<br>ಮಾನ್ಯ ವ್ಯವಸ್ಥಾಪನಾ ಮಂಡಳಿಯು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ ಕಲಂ 57 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, 2021–22ನೇ ಸಾಲಿನ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಅನುಮೋದಿಸಿತು. ಮುಂದುವರೆದು, ಕರಡು ವಾರ್ಷಿಕ ವರದಿಯಲ್ಲಿ ಕೇವಲ ರೈತರು ವಿವಿಧ ತರಬೇತಿಗಳಿಗೆ ಭಾಗವಹಿಸಿದ ಸಂಖ್ಯೆಗಳನ್ನು ಮಾತ್ರ ನಮೂದಿಸಿದ್ದು, ರೈತರ ಹೆಸರುಗಳನ್ನು ಸೇರಿಸಲು ಮಂಡಳಿಯು ಸಲಹೆ ನೀಡಿತು.<br>**(ಕ್ರಮ : ಶಿಕ್ಷಣ ನಿರ್ದೇಶಕರು / ಕುಲಸಚಿವರು)** |
| ಐಟಂ–12 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಹನ್ನೆರಡನೇ ಘಟಿಕೋತ್ಸವಕ್ಕೆ ಅತಿಥಿಗಳ ಯಾದಿಯನ್ನು (ಪರಿಷ್ಕೃತ ಪಟ್ಟಿ) ಅಂತಿಮಗೊಳಿಸುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಸಭೆಯು ಸರ್ವಾನುಮತದಿಂದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಹನ್ನೆರಡನೇ ಘಟಿಕೋತ್ಸವದ ಸಂದರ್ಭದಲ್ಲಿ ಅತಿಥಿಗಳಾಗಿ ಆಹ್ವಾನಿಸಲು ಪ್ರಸ್ತಾಪಿಸಿದ **ಪರಿಷ್ಕೃತ ಗಣ್ಯರ ಯಾದಿಯಂತೆ** ಕ್ರಮಾನುಗತವಾಗಿ ಈ ಕೆಳಕಂಡ ಗಣ್ಯರ ವ್ಯಕ್ತಿ ಪರಿಚಯದೊಂದಿಗೆ ಗೌರವಾನ್ವಿತ ಕುಲಾಧಿಪತಿಗಳಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಠರಾಯಿಸಿತು: |

| | |
|---|---|
| 1 | ಡಾ. ಹಿಮಾನ್ಶೂ ಪಾಟಕ್, ಕಾರ್ಯದರ್ಶಿ(ಡಿ.ಎ.ಆರ್.ಇ.) ಮತ್ತು ಡೈರೆಕ್ಟರ್ ಜನರಲ್, ಐ.ಸಿ.ಎ.ಆರ್., ನವದೆಹೆಲಿ |
| 2 | ಡಾ. ಕೆ.ಎಸ್.ವ್ಯಾಸ್, ಭಾಭಾ ಅಟೋಮಿಕ್ ರಿಸರ್ಚ್ ಸೆಂಟರ್, ಟ್ರಾಂಬೆ, ಮುಂಬಯಿ |
| 3 | ಡಾ. ಸುಧಾ ನಾರಾಯಣಮೂರ್ತಿ, ನಾರಾಯಣಮೂರ್ತಿ ಫೌಂಡೇಶನ್, ಇನ್‌ಫೋಸಿಸ್, ಬೆಂಗಳೂರು |
| 4 | ಡಾ. ವಿರೇಂದ್ರ ಹೆಗಡೆ, ಆಡಳಿತಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ ಹಾಗೂ ರಾಜ್ಯಸಭಾ ಸದಸ್ಯರು |
| 5 | ಜಸ್ಟೀಸ್ ಶಿವರಾಜ್ ವಿರುಪಣ್ಣ ಪಾಟೀಲ್, ನಿವೃತ್ತಿ ನ್ಯಾಯಾಧೀಶರು, ಸರ್ವೋಚ್ಛ ನ್ಯಾಯಾಲಯ, ನವದೆಹಲಿ. |
| 6 | ಡಾ. ಅಶೋಕ ದಳವಾಯಿ, ಅಡಿಶ್ನಲ್ ಕಾರ್ಯದರ್ಶಿ, ಕೃಷಿ ಮತ್ತು ರೈತರ ಕ್ಷೇಮಾಭಿವೃದ್ಧಿ ಮಂತ್ರಾಲಯ, ಕೃಷಿ ಸಹಕಾರ ಮತ್ತು ರೈತರ ಕ್ಷೇಮಾಭಿವೃದ್ಧಿ ಇಲಾಖೆ, ಭಾರತ ಸರಕಾರ, ಕೃಷಿ ಭವನ, ನವದೆಹೆಲಿ. |

| | |
|---|---|
| 7 | ಡಾ. ಬಿ.ಎಸ್. ಪಾಟೀಲ್, ಡೈರೆಕ್ಟರ್, ಫ್ರೂಟ್ಸ್ & ವೆಜಿಟೇಬಲ್ ಇಂಪ್ರೋವ್‌ಮೆಂಟ್ ಸೆಂಟರ್, ಟೆಕ್ಸಾಸ್, ಯು.ಎಸ್.ಎ. |
| 8 | ಡಾ. ಎಸ್.ಎನ್. ಝಾ, ಉಪ–ಮಹಾನಿರ್ದೇಶಕರು, ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ |

(ಕ್ರಮ: ಕುಲಸಚಿವರು)

| | |
|---|---|
| ಐಟಂ–13 | **ಶ್ರೀಮತಿ ಗಂಗಮ್ಮಾ ಗುರಪ್ಪಾ ಪಾಟ್ನೆ ಗೋರ್ಟಾ (ಬಿ) ಗ್ರಾಮ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ ಇವರ ಹೆಸರಿನಲ್ಲಿ ವಿದ್ಯಾರ್ಥಿ ವೇತನವನ್ನು ಸ್ಥಾಪಿಸುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಕೃಷಿ ಮಹಾವಿದ್ಯಾಲಯ, ರಾಯಚೂರಿನ ಒಬ್ಬ ಬಡ ವಿದ್ಯಾರ್ಥಿಗೆ "**ಶ್ರೀಮತಿ ಗಂಗಮ್ಮಾ ಗುರಪ್ಪಾ ಪಾಟ್ನೆ ಗೋರ್ಟಾ (ಬಿ) ಗ್ರಾಮ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ**" ಇವರ ಹೆಸರಿನಲ್ಲಿ ಕೃವಿವಿ.,ಯ ವಿದ್ಯಾರ್ಥಿ ವೇತನ ನಿಯಮಗಳು ಹಾಗೂ ಪ್ರಾಯೋಜಕರು ಸೂಚಿಸಿದ ಷರತ್ತುಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿ ವೇತನವನ್ನು ಸ್ಥಾಪಿಸಲು ಹಾಗೂ ಅರ್ಹ ವಿದ್ಯಾರ್ಥಿಗೆ ವಿದ್ಯಾರ್ಥಿ ವೇತನವನ್ನು ಪ್ರಸ್ತುತ ಶೈಕ್ಷಣಿಕ ವರ್ಷದಿಂದ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದಿಸಿತು.<br><br>(ಕ್ರಮ: ಕುಲಸಚಿವರು) |
| ಐಟಂ–14 | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಮಾತೃತ್ವ (ಹೆರಿಗೆ) ರಜೆ ಸೌಲಭ್ಯವನ್ನು ವಿಸ್ತರಿಸುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಆಇ 08 ಎಸ್‌ಆರ್‌ಎಸ್ 2022 ದಿನಾಂಕ 23–06–2022 ರಲ್ಲಿ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಹಾಗೂ ಅಂಗ ಸಂಸ್ಥೆಗಳಾದ ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಹಿಳಾ ನೌಕರರಿಗೆ ಮಾತೃತ್ವ (ಹೆರಿಗೆ) ರಜೆಯ ಸೌಲಭ್ಯವನ್ನು ವಿಸ್ತರಿಸಿದ್ದು, ಸದರಿ ಆದೇಶವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>(ಕ್ರಮ: ಕುಲಸಚಿವರು) |
| | **ಹೆಚ್ಚುವರಿ ಕಾರ್ಯಸೂಚಿಯ ವಿಷಯಗಳು** |
| ಹೆಚ್ಚುವರಿ ಕಾರ್ಯಸೂಚಿ ಐಟಂ–1 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ 2021–22 ನೇ ಸಾಲಿನ ಅಂದಾಜು ಆಯವ್ಯಯ ಮತ್ತು ಪರಿಷ್ಕೃತ ಆಯವ್ಯಯ ಹಾಗೂ 2022–23 ನೇ ಸಾಲಿನ ಅಂದಾಜು ಆಯವ್ಯಯಗಳಿಗೆ ಅನುಮೋದನೆ ನೀಡುವ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಈ ಕೆಳಗೆ ಮಂಡಿಸಿದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ 2021–22ನೇ ಸಾಲಿನ ಅಂದಾಜು ಆಯವ್ಯಯ ಮತ್ತು ಪರಿಷ್ಕೃತ ಆಯವ್ಯಯ ಹಾಗೂ 2022–23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಹಣಕಾಸು ಸಮಿತಿಯು ಶಿಫಾರಸ್ಸು ಮಾಡಿರುವುದನ್ನು ಕೃವಿವಿ ಅಧಿನಿಯಮದ ಕಲಂ 13(2)(i) ಹಾಗೂ 39(2) ಅಡಿಯಲ್ಲಿ ಉಪಬಂಧಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು: |

**ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ 2021-22ನೇ ಸಾಲಿನ ಅಂದಾಜು ಆಯವ್ಯಯ ಮತ್ತು ಪರಿಷ್ಕೃತ ಆಯವ್ಯಯ:**

| ಕ್ರ.ಸಂ | ವಿವರಗಳು | 2021-22 ನೇ ಸಾಲಿನ ಅಂದಾಜು ಆಯವ್ಯಯ | 2021-22 ನೇ ಸಾಲಿನ ಪರಿಷ್ಕೃತ ಆಯವ್ಯಯ |
|---|---|---|---|
| I | ಕೃಷಿ ಸಂಶೋಧನೆ | | |
| 1 | ಆಡಳಿತ ಕಛೇರಿಗಳು | 28,09,39,000.00 | 42,79,33,511.00 |
| 2 | ಕೃಷಿ ಮಹಾವಿದ್ಯಾಲಯಗಳು | 32,70,08,000.00 | 23,84,39,938.00 |
| 3 | ಕೃಷಿ ಸಂಶೋಧನಾ ಕೇಂದ್ರಗಳು | 22,47,51,000.00 | 16,09,33,849.00 |
| 4 | ಕೃಷಿ ವಿಸ್ತರಣಾ ಘಟಕಗಳು | 4,52,93,000.00 | 73,60,45,143.00 |
| | ಮೊತ್ತ | **87,79,91,000.00** | **1,56,33,52,441.00** |
| II | ಸಾಮಾನ್ಯ | | |
| 1 | ಕೃಷಿ ಸಂಶೋಧನೆ (ಸಾಮಾನ್ಯ) | 1,76,29,000.00 | 4,33,53,701.00 |
| 2 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಸಂಶೋಧನೆ) | 43,76,275.00 | 43,76,275.00 |
| 3 | ಗಿರಿಜನ ಉಪಯೋಜನೆ (TSP) (ಕೃಷಿ ಸಂಶೋಧನೆ) | 29,69,848.00 | 29,69,848.00 |
| 4 | ಕೃಷಿ ಶಿಕ್ಷಣ (ಸಾಮಾನ್ಯ) | 8,21,10,000.00 | 8,40,50,607.00 |
| | ಮೊತ್ತ | **10,70,85,123.00** | **13,47,50,431.00** |
| III | ಇತರೆ ಯೋಜನೆಗಳು (GOK) | | |
| 1 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಶಿಕ್ಷಣ) | 2,92,77,402.00 | 3,40,16,518.00 |
| 2 | ಗಿರಿಜನ ಉಪಯೋಜನೆ (TSP) (ಕೃಷಿ ಶಿಕ್ಷಣ) | 2,60,81,127.00 | 1,04,69,177.00 |
| 3 | ಭೂ-ಸ್ವಾಧೀನ (Land Acquisition) | 6,92,78,634.00 | 6,92,78,634.00 |
| 4 | RIDF-20 (ನಬಾರ್ಡ್) | 0.00 | 0.00 |
| 5 | ಪರಿಶಿಷ್ಟ ಜಾತಿ/ಪಂಗಡ (ವಸತಿ ನಿಲಯ ನಿರ್ಮಾಣ) | 0.00 | 0.00 |
| 6 | ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ (RKVY) | 15,55,00,000.00 | 37,94,28,386.00 |
| | ಮೊತ್ತ | **28,01,37,163.00** | **49,31,92,715.00** |
| IV | ಖಾಯಂ ಯೋಜನೆಗಳು ಮತ್ತು ಕೆ.ವಿ.ಕೆ | | |
| 1 | ಎ.ಐ.ಸಿಆರ್.ಪಿ. ಯೋಜನೆಗಳು | 10,00,00,000.00 | 14,54,26,267.00 |
| 2 | ಕೃಷಿ ವಿಜ್ಞಾನ ಕೇಂದ್ರಗಳು | 10,00,00,000.00 | 13,03,71,426.00 |
| 3 | ಅಭಿವೃದ್ಧಿ ಅನುದಾನ (ICAR-SAU) | 5,00,00,000.00 | 2,00,95,692.00 |
| | ಮೊತ್ತ | **25,00,00,000.00** | **29,58,93,385.00** |
| V | ಆಡ್ಹಾಕ್ ಯೋಜನೆಗಳು | | |
| 1 | ಆಡ್ಹಾಕ್ ಯೋಜನೆಗಳು | 30,00,00,000.00 | 38,37,66,546.00 |
| | ಮೊತ್ತ | **30,00,00,000.00** | **38,37,66,546.00** |
| VI | ಇತರೆ | | |
| 1 | ಸುಜಾಲಾ III ಯೋಜನೆ | 90,00,000.00 | 2,69,00,678.00 |

| | | | |
|---|---|---|---|
| 2 | ಡಿ.ಎಸ್.ಟಿ. ಯೋಜನೆ | 0.00 | 16,26,933.00 |
| 3 | ಇ.ಎಫ್.ಟಿ.ಎಲ್. ಯೋಜನೆ | 21,40,502.00 | 7,05,502.00 |
| 4 | ಎನ್. ಆರ್. ಐ. ಅನುದಾನ | 6,00,00,000.00 | 0.00 |
| 5 | ಆವರ್ತ ನಿಧಿ ಯೋಜನೆಗಳು | 0.00 | 42,56,52,366.00 |
| 6 | ಡಿ.ಇ.ಬಿ.ಟಿ. ಮತ್ತು ರಹಸ್ಯ ಖಾತೆ (Suspense Account) | 0.00 | 2,47,84,12,415.00 |
| | ಮೊತ್ತ | **7,11,40,502.00** | **2,93,32,97,894.00** |
| | ಒಟ್ಟು ಮೊತ್ತ | **1,88,63,53,788.00** | **5,80,42,53,412.00** |

**ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ 2022-23ನೇ ಸಾಲಿನ ಆಯವ್ಯಯ ಅಂದಾಜುಗಳು:**

| ಕ್ರ.ಸಂ | ವಿವರಗಳು | 2022-23 ನೇ ಸಾಲಿನ ಅಂದಾಜು ಆಯವ್ಯಯ |
|---|---|---|
| **I** | ಕೃಷಿ ಸಂಶೋಧನೆ | |
| 1 | ಆಡಳಿತ ಕಛೇರಿಗಳು | 55,10,32,840.00 |
| 2 | ಕೃಷಿ ಮಹಾವಿದ್ಯಾಲಯಗಳು | 40,15,46,800.00 |
| 3 | ಕೃಷಿ ಸಂಶೋಧನಾ ಕೇಂದ್ರಗಳು | 22,07,52,360.00 |
| 4 | ಕೃಷಿ ವಿಸ್ತರಣಾ ಘಟಕಗಳು | 4,98,58,000.00 |
| | ಮೊತ್ತ | **1,22,31,90,000.00** |
| **II** | ಸಾಮಾನ್ಯ | |
| 1 | ಕೃಷಿ ಸಂಶೋಧನೆ (ಸಾಮಾನ್ಯ) | 3,44,37,500.00 |
| 2 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಸಂಶೋಧನೆ) | 22,85,799.00 |
| 3 | ಗಿರಿಜನ ಉಪಯೋಜನೆ (TSP) (ಕೃಷಿ ಸಂಶೋಧನೆ) | 11,38,665.00 |
| 4 | ಕೃಷಿ ಶಿಕ್ಷಣ (ಸಾಮಾನ್ಯ) | 7,60,78,500.00 |
| | ಮೊತ್ತ | **11,39,40,464.00** |
| **III** | **ಇತರೆ ಯೋಜನೆಗಳು (GOK)** | |
| 1 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಶಿಕ್ಷಣ) | 2,26,91,054.00 |
| 2 | ಗಿರಿಜನ ಉಪಯೋಜನೆ (TSP) (ಕೃಷಿ ಶಿಕ್ಷಣ) | 1,71,31,232.00 |
| 3 | ಭೂ-ಸ್ವಾಧೀನ (Land Acquisition) | 6,92,78,634.00 |
| 4 | RIDF-20 (ನಬಾರ್ಡ) | 5,00,00,000.00 |
| 5 | ಪರಿಶಿಷ್ಟ ಜಾತಿ/ಪಂಗಡ (ವಸತಿ ನಿಲಯ ನಿರ್ಮಾಣ) | 0.00 |
| 6 | ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ (RKVY) | 9,00,00,000.00 |
| | ಮೊತ್ತ | **24,91,00,920.00** |
| **IV** | ಖಾಯಂ ಯೋಜನೆಗಳು ಮತ್ತು ಕೆ.ವಿ.ಕೆ | |
| 1 | ಎ.ಐ.ಸಿಆರ್.ಪಿ. ಯೋಜನೆಗಳು | 15,00,00,000.00 |
| 2 | ಕೃಷಿ ವಿಜ್ಞಾನ ಕೇಂದ್ರಗಳು | 14,00,00,000.00 |
| 3 | ಅಭಿವೃದ್ಧಿ ಅನುದಾನ (ICAR-SAU) | 3,00,00,000.00 |
| | ಮೊತ್ತ | **32,00,00,000.00** |
| **V** | ಆಡ್ಹಾಕ್ ಯೋಜನೆಗಳು | |
| 1 | ಆಡ್ಹಾಕ್ ಯೋಜನೆಗಳು | 30,00,00,000.00 |
| | ಮೊತ್ತ | **30,00,00,000.00** |
| **VI** | ಇತರೆ | |
| 1 | ಸುಜಾಲಾ III ಯೋಜನೆ | 1,13,88,323.00 |

| | | |
|---|---|---|
| 2 | ಡಿ.ಎಸ್.ಟಿ. ಯೋಜನೆ | 1,34,986.00 |
| 3 | ಇ.ಎಫ್.ಟಿ.ಎಲ್. ಯೋಜನೆ | 0.00 |
| 4 | ಎನ್. ಆರ್. ಐ. ಅನುದಾನ | 0.00 |
| 5 | ಆವರ್ತ ನಿಧಿ ಯೋಜನೆಗಳು | 0.00 |
| 6 | ಡಿ.ಇ.ಬಿ.ಟಿ. ಮತ್ತು ರಹಸ್ಯ ಖಾತೆ (Suspense Account) | 2,40,00,00,000.00 |
| | **ಮೊತ್ತ** | **2,41,15,23,309.00** |
| | **ಒಟ್ಟು ಮೊತ್ತ** | **4,61,77,54,693.00** |

**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)**

**ಹೆಚ್ಚುವರಿ ಕಾರ್ಯಸೂಚಿ ಐಟಂ–2**

**2023–24 ನೇ ಸಾಲಿಗೆ ಸರ್ಕಾರದಿಂದ ಹಂಚಿಕೆಯಾದ ಅನುದಾನದಲ್ಲಿ ವಿಶ್ವವಿದ್ಯಾಲಯದ ವಿವಿಧ ಯೋಜನೆಗಳಿಗೆ ಏಪ್ರಿಲ್–2023 ರಿಂದ ವೆಚ್ಚ ಭರಿಸಲು ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿಗೆ 2023–24ನೇ ಸಾಲಿಗಾಗಿಸರಕಾರದಿಂದ ಹಂಚಿಕೆಯಾದ ಅನುದಾನಗಳಿಗೆ ಅನುಗುಣವಾಗಿ ಈ ಕೆಳಗೆ ಮಂಡಿಸಿದ ಯೋಜನೆವಾರು ವೆಚ್ಚ ಭರಿಸುವ ವಿವರವನ್ನು ಹಣಕಾಸು ಸಮಿತಿಯು ಶಿಫಾರಸ್ಸು ಮಾಡಿರುವುದನ್ನು ಕೃವಿವಿ ಅಧಿನಿಯಮದ ಕಲಂ 13(2)(i) ಹಾಗೂ 39(2) ಅಡಿಯಲ್ಲಿ ಉಪಬಂಧಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು:

| | | |
|---|---|---|
| 101 | ಸಹಾಯಾನುದಾನ ವೇತನಗಳು | 7731.00 |
| 103 | ಸಹಾಯಾನುದಾನ ಸಾಮಾನ್ಯ | 663.71 |
| 115 | ಸಹಾಯಾನುದಾನ ಗುತ್ತಿಗೆ / ಹೊರಗುತ್ತಿಗೆ | 690.48 |
| 118 | ಸಹಾಯಾನುದಾನ ವಿಶ್ರಾಂತಿ ವೇತನಗಳು | 2151.84 |
| 422 | ಪರಿಶಿಷ್ಟ ಜಾತಿ ಉಪ ಯೋಜನೆ | 86.00 |
| 423 | ಗಿರಿಜನ ಉಪ ಯೋಜನೆ | 35.00 |
| | **ಒಟ್ಟು** | **11357.53** |

ಮುಂದುವರೆದು, ಸಹಾಯಾನುದಾನ ಸಾಮಾನ್ಯ ಯೋಜನೆಯಡಿಯಲ್ಲಿ ಹೆಚ್ಚುವರಿ ಅನುದಾನವನ್ನು ಕೋರಿ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.

**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)**

**ಹೆಚ್ಚುವರಿ ಕಾರ್ಯಸೂಚಿ ಐಟಂ–3**

**2021–22ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಪ್ರೋತ್ಸಾಹ ಧನ ನೀಡಲು ಹಣಕಾಸಿನ ಅನುಮೋದನೆ ಕುರಿತು.**

**ಠರಾವು:**

ಚರ್ಚೆಯ ನಂತರ, 2021–22 ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯಡಿಯಲ್ಲಿ ಬಿಡುಗಡೆಯಾಗಲಿರುವ ಪ್ರೋತ್ಸಾಹ ಧನವನ್ನು ಈ ಕೆಳಕಂಡಂತೆ ಕೋಷ್ಟಕದಲ್ಲಿ ತೋರಿಸಿದಂತೆ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| ಕ್ರ.ಸಂ | ಹಣಕಾಸಿನ ಮೂಲ | ಪ್ರಮಾಣ (ಕ್ವಿಂ) | ಮೊತ್ತ (ಲಕ್ಷಗಳಲ್ಲಿ) | ಲೆಕ್ಕ ಶೀರ್ಷಿಕೆ ಸಂಖ್ಯೆ |
|---|---|---|---|---|
| 1. | ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ ಮುಂಗಾರು 2021–22 ಹಂಗಾಮು | 2816.05 | 140.80250 | 7411/591 |

| | | | | | |
|---|---|---|---|---|---|
| | 2. | ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ ಹಿಂಗಾರು 2021-22 ಹಂಗಾಮು | 1310.8 | 65.54 | 7411/591 |
| | | | ಒಟ್ಟು | 206.34250 | |

(ಕ್ರಮ : ವಿಶೇಷಾಧಿಕಾರಿಗಳು (ಬೀಜ))

| | |
|---|---|
| ಹೆಚ್ಚುವರಿ ಕಾರ್ಯಸೂಚಿ ಐಟಂ-4 | **ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣದ ಖರೀದಿಗೆ ಅನುಮೋದನೆ ನೀಡುವ ಕುರಿತು.** |

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಪ್ರಯೋಗಾಲಯದ ಪ್ರತಿ ಉಪಕರಣಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| | | | | | |
|---|---|---|---|---|---|
| 1 | Mold | Seed Womb Technology Project, Director of Research, UAS, Raichur. | 01 set | 14.00 | 7606/701 KKRDB-GoK Afforestation-Establishment of Seed Womb Project |
| 2 | Seed Processing Plant | Seed Unit, UAS, Raichur. | 01 set | 168.00 (Revolving Fund- 75.00 Seed Hub project - 20.00 UAS Grants- 73.00) | Revolving Fund-Soybean Project UAS Grants |

ಮುಂದುವರೆದು, ಕ್ರಮ ಸಂಖ್ಯೆ 2 ರಲ್ಲಿ ಸೂಚಿಸಿರುವ ಉಪಕರಣಕ್ಕೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ರೂ. 73.00 ಲಕ್ಷಗಳ ಅನುದಾನವನ್ನು ವಿಶ್ವವಿದ್ಯಾಲಯಕ್ಕೆ ಮರುಪಾವತಿಸುವ ಷರತ್ತಿಗೊಳಪಟ್ಟು ಕೃವಿವಿ., ಅನುದಾನವನ್ನು ಬಳಸಿಕೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಸರಕು ಖರೀದಿ ಅಧಿಕಾರಿ)

| | |
|---|---|
| ಹೆಚ್ಚುವರಿ ಕಾರ್ಯಸೂಚಿ ಐಟಂ-5 | Injection Molding Machine **ಖರೀದಿಗೆ ಸಂಬಂಧಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ 51ನೇ ಸಭೆಯಲ್ಲಿ ಅನುಮೋದಿಸಲಾದ ಪ್ರಮಾಣವನ್ನು ಸ್ಥಿರೀಕರಿಸುವ ಕುರಿತು.** |

**ಠರಾವು:**

ಮಾನ್ಯ ವ್ಯವಸ್ಥಾಪನಾ ಮಂಡಳಿಯ 51ನೇ ಸಭೆಯಲ್ಲಿ ನಿರ್ಣಯಿಸಿದಂತೆ ರೂ. 75.00 ಲಕ್ಷಗಳ ಅನುದಾನದಲ್ಲಿ **01 ಪ್ರಮಾಣದ Injection Molding Machine ಖರೀದಿಯ ಬದಲಾಗಿ ಅದೇ ಅನುದಾನದಲ್ಲಿ 03 ಯಂತ್ರಗಳ ಖರೀದಿಸಿದ ಕ್ರಮವನ್ನು** ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸ್ಥಿರೀಕರಿಸಲಾಯಿತು.

(ಕ್ರಮ : ಸರಕು ಖರೀದಿ ಅಧಿಕಾರಿ)

| | ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು |
|---|---|
| 1 | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿವಿಧ ಆವರಣಗಳಲ್ಲಿ Programmable S.P.V. ಆಧಾರಿತ LED ದೀಪಗಳನ್ನು, High Mast Light ಉಪಕರಣಗಳನ್ನು ಹಾಗೂ Smart Class ಅಳವಡಿಸುವಿಕೆಗೆ ಅನುಮೋದನೆ ನೀಡುವ ಕುರಿತು.**<br><br>ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿವಿಧ ಆವರಣಗಳಲ್ಲಿನ ಕಟ್ಟಡಗಳಲ್ಲಿ ವಿದ್ಯುತ್ ಆಧಾರಿತ ಲೈಟಿಂಗ್ಸ್ / ಫ್ಯಾನ್‌ಗಳ ವ್ಯವಸ್ಥೆ ಹೊಂದಿದ್ದು, ಪ್ರತಿ ತಿಂಗಳು ದುಬಾರಿ ವಿದ್ಯುತ್ ಬಿಲ್ ಪಾವತಿಯಿಂದಾಗಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆ ಎದುರಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ಹಾಗೂ ಸದರಿ ಸಂಸ್ಥೆಗಳನ್ನು ಮೇಲ್ದರ್ಜೆಗೆರಿಸಲು 200 Programmable S.P.V. ಆಧಾರಿತ LED ದೀಪಗಳನ್ನು, 250 ಹೈಮಾಸ್ಕ್ ದೀಪಗಳ ಅವಶ್ಯಕತೆ ಇದ್ದು ಹಾಗೂ ಐದು ಕೃಷಿ ಮಹಾವಿದ್ಯಾಲಯ / 2 ಡಿಪ್ಲೋಮಾಗಳಲ್ಲಿ 45 Smart Class ಅಳವಡಿಸುವಿಕೆಯು ಅವಶ್ಯಕತೆ ಇರುವುದನ್ನು ಸಭೆಯಲ್ಲಿ ಚರ್ಚಿಸಲಾಯಿತು.<br><br>**ಠರಾವು:**<br>ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿವಿಧ ಆವರಣಗಳಲ್ಲಿ 200 Programmable S.P.V. ಆಧಾರಿತ LED ದೀಪಗಳನ್ನು, 250 ಹೈಮಾಸ್ಕ್ ದೀಪ ಹಾಗೂ ಐದು ಕೃಷಿ ಮಹಾವಿದ್ಯಾಲಯ / 2 ಡಿಪ್ಲೋಮಾಗಳಲ್ಲಿ 45 Smart Class ಅಳವಡಿಸುವಿಕೆಯು ಅವಶ್ಯಕತೆ ಇದ್ದು ಕಿಯೋನಿಕ್ಸ್ ವತಿಯಿಂದ / ಸರಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸದರಿ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಹಾಗೂ ಸದರಿ ಕಾರ್ಯಕ್ಕೆ ಅವಶ್ಯವಿರುವ ಅಂದಾಜು ರೂ. 29.00 ಕೋಟಿಗಳ ಅನುದಾನಕ್ಕಾಗಿ ಕಲ್ಯಾಣ-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.<br>**(ಕ್ರಮ : ಕುಲಸಚಿವರು/ ಸರಕು ಖರೀದಿ ಅಧಿಕಾರಿ)** |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ/- 06-04-2023 | ಸಹಿ/- 06-04-2023 |
|---|---|
| **(ಎಂ. ಹನುಮಂತಪ್ಪ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ. ವೀರನಗೌಡ)**<br>ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ. ವೀರನಗೌಡ)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ
ಕೃ.ವಿ.ವಿ., ರಾಯಚೂರು.